ಶ್ರೀ ವಾಟಾಳ್ ನಾಗರಾಜ್: ಸಭೆಯನ್ನು ಯಾವಾಗ ಮುಂದಕ್ಕೆ ಹಾಕುತ್ತೀರೆಂದು ನಮಗೆ ಗೊತ್ತೇ ಆಗುವುದಿಲ್ಲ. ಇದ್ದಕ್ಕಿದ್ದಂತೆ ಮುಂದಕ್ಕೆ ಹಾಕುತ್ತೀರಿ. ನಾವು ಅಧ್ಯಕ್ಷರನ್ನೇನು ಮಾಡೋಣ. ಅವರ ಗತಿ ಅಪರಿಸ್ಥಿತಿಯಾಗಿದೆ. ನಾವು ರಾತ್ರಿ ಎಂಟು ಗಂಟೆಯವರೆಗೆ ಬೇಕಾದರೆ ಕುಳಿತುಕೊಳ್ಳಲು ತಯಾರಾಗಿದ್ದೆವು.

ಶ್ರೀ ಹಾರನಳ್ಳಿರಾಮಸ್ವಾಮಿ : ಅಪ್ಪಣೆ ಬಹಳ ಸಂತೋಷ. ತಮಗೆ ಧನ್ಯವಾದಗಳು.

(2)ಗುಲ್ಬರ್ಗ ಜಿಲ್ಲೆಯ ಜೇವರ್ಗಿ ತಾಲ್ಲೂಕಿನಲ್ಲಿ ತೊಗರಿ ಬೆಳೆಯು ನಾಶವಾದಂತಹ ರೈತರಿಗೆ ಪರಿಹಾರ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ನಾನು ಶೂನ್ಯ ವೇಳೆಯಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೆ. ಅದೇನೆಂದರೆ ಗುಲ್ಬರ್ಗ ಜಿಲ್ಲೆಯ ಜೇವರ್ಗಿ ರತಾಲ್ಲೂಕಿನಲ್ಲಿ ತೊಗರಿ ಬೆಳೆಯು ನಾಶವಾದಂಥ ರೈತರಿಗೆ ಪರಿಹಾರವನ್ನು ಕೊಟ್ಟಿಲ್ಲವೆಂದು ರೈತರು ಕಳೆದ ಒಂದು ವಾರದಿಂದ ಅಮರಣಾಂತ ಉಪವಾಸವನ್ನು ಮಾಡುತ್ತಿದ್ದಾರೆ. ಈಗಾಗಲೇ 5 ಜನರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ತಾವು ತುಂಬ ಧಾರಾಳದಿಂದ ತೊಗರಿ ಬೆಳೆಯು ನಾಶವಾಗಿದ್ದಕ್ಕೆ ಪರಿಹಾರವನ್ನು ಕೊಟ್ಟಿರಿ. ನಾನೇನು ಪರಿಹಾರವನ್ನು ಕೊಟ್ಟಿಲ್ಲವೆಂದು ಹೇಳುವುದಿಲ್ಲ. ತಾವು ಇನ್ನೂ ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆಯೆಂದು ಹೇಳಿದ್ದೀರಿ. ಕೆಲವರಿಗೆ ಚೆಕ್ ಕೊಟ್ಟಿದ್ದಕ್ಕೆ ಆನರ್ ಆಗಿದೆ, ಇನ್ನು ಒಂದು ಕೋಟಿ ರೂಪಾಯಿಗಳಷ್ಟು ಚೆಕ್ ಆನರ್ ಆಗಿಲ್ಲ. ಮಾನ್ಯ ಕೃಷಿ ಸಚಿವರು ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ ಅದರ ಕಡೆಗೆ ಹಣವನ್ನು ಬಿಡುಗಡೆ ಮಾಡಿ ಅದನ್ನು ಆನರ್ ಆಗುವಂತೆ ನೋಡಿಕೊಳ್ಳುತ್ತೇವೆಂದು ಹೇಳಿದ್ದರು. ಆದರೆ ಗುಲ್ಬರ್ಗ ಜಿಲ್ಲೆಯ ಜೇವರ್ಗಿ ತಾಲ್ಲೂಕಿನಲ್ಲಿ ತೊಗರಿ ಬೆಳೆಯು ನಾಶವಾಗಿರುವಂಥವರಿಗೆ ಶೇಕಡ 5 ರಷ್ಟು ಜನರಿಗೆ ಸಹ ಪರಿಹಾರ ಸಿಗದೇ ಇರುವುದರಿಂದ ಕಳೆದ ಒಂದು ವಾರದಿಂದ ಅಲ್ಲಿ ಅಮರಣಾಂತ ಉಪವಾಸವನ್ನು ಮಾಡುತ್ತಿದ್ದಾರೆ. 5-6 ಜನರು ಈಗಾಗಲೇ ಆಸ್ಪತ್ರೆಗೆ ಸೇರಿದ್ದಾರೆ. ಆದ್ದರಿಂದ ನಾನು ದಯಮಾಡಿ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು ವಿನೆಂದರೆ, ಅಲ್ಲಿ ಉಪವಾಸ ನಿಲ್ಲುವ ವ್ಯವಸ್ಥೆ ಮಾಡಬೇಕು ಮತ್ತು ತೊಗರಿ ಬೆಳೆ ನಾಶವಾದಂಥವರಿಗೆ ಪರಿಹಾರವನ್ನು ಕೊಡಲು ಇವತ್ತಿನಿಂದಲೇ ಹಣವನ್ನು ಬಿಡುಗಡೆ ಮಾಡಬೇಕು. ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಿ ಚೆಕ್ಗಳನ್ನು ಕೊಟ್ಟಿದ್ದಾರೆ. ಆದರೆ ಆ ಚೆಕ್ಗಳು ಆನರ್ ಆಗಿಲ್ಲ. ಅದರ ಬಗ್ಗೆ ಸದನದಲ್ಲಿ ಅನೇಕ ಬಾರಿ ಪ್ರಸ್ತಾಪ ಮಾಡಿದ್ದೇವೆ. ಸಂಬಂಧಪಟ್ಟ ಸಚಿವರು ಸಹ ಅದರ ಕಡೆಗೆ ಗಮನಕೊಡುತ್ತೇವೆಂದು ಹೇಳಿದ್ದರು. ತಾವೂ ಕೂಡ ಅದರ ಬಗ್ಗೆ ಗಮನ ಕೊಡುತ್ತೀನೆಂದು ಹೇಳಿದ್ದೀರಿ. ಆದ್ದರಿಂದ ಮೊದಲು ಜೇವರ್ಗಿ ತಾಲ್ಲೂಕಿಗೆ ಹಣವನ್ನು ಬಿಡುಗಡೆ ಮಾಡಿ, ತೊಗರಿ ಬೆಳೆ ನಾಶವಾದಂಥವರಿಗೆ ಪರಿಹಾರವನ್ನು ಒದಗಿಸಿಕೊಡಬೇಕು ಮತ್ತು ಚೆಕ್ ಆನರ್ ಆಗದೇ ಇರತಕ್ಕವರಿಗೆ ತಕ್ಷಣ ಆ ಚೆಕ್ನ್ನು ಪ್ರಜೆಂಟ್ ಮಾಡಿಸಿ ಅದು ಆನರ್ ಆಗುವಂತೆ ನೋಡಿಕೊಳ್ಳತಕ್ಕದ್ದು, ಮತ್ತು ತಾವೇ ಆ ಸದನದಲ್ಲಿ ಭರವಸೆಯನ್ನು ಕೊಟ್ಟಿರುವ ಪ್ರಕಾರ ಉಳಿದ ಎರಡು ಕೋಟಿ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಿ ಅಲ್ಲಿ ಅಮರಣಾಂತ ಉಪವಾಸ ನಿಲ್ಲುವಂತಹ ವ್ಯವಸ್ಥೆಯನ್ನು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ನನ್ನ ಅನುಭವಕ್ಕೆ ಬಂದಾಗ ನಾನು ಕೂಡ ಗುಲ್ಬರ್ಗ ಜಿಲ್ಲೆಯಲ್ಲಿ ಸಮೀಕ್ಷೆಯನ್ನು ನಡೆಸಿದಾಗ, ನಾವು ಈಗಾಗಲೇ ಸುಮಾರು 10ಕೋಟಿ ರೂಪಾಯಿಗಳನ್ನು ತೊಗರಿ ಬೆಳೆಯ ನಾಶಕ್ಕಾಗಿ ಪರಿಹಾರವನ್ನು ಬಿಡುಗಡೆ ಮಾಡಿದ್ದೇವೆ. ಇನ್ನೂ ಸುಮಾರು 40 ಲಕ್ಷ ರೂಪಾಯಿ ವಿನು ಅಲ್ಲಿಯ ಚೆಕ್ಗಳು ಆನರ್ ಆಗಿಲ್ಲ ಅದನ್ನು ನನ್ನ ನೆನಪಿನ

ಪ್ರಕಾರ ಕೂಡಲೆ ಆದೇಶವನ್ನು ಕೊಟ್ಟು ಅದೂ ಕ್ಯಾಷ್ ಆಗಿದೆ. ಇನ್ನು ಉಳಿದಿರತಕ್ಕದ್ದು ಒಂದು ಕೋಟಿ ರೂಪಾಯಿ ಚೆಕ್ ಇಲ್ಲ. ಇನ್ನು ಉಳಿದಿರತಕ್ಕದ್ದು ಒಟ್ಟು ಎರಡು ಕೋಟಿ ರೂಪಾಯಿಗಳು. ನನಗೆ ಗೊತ್ತಿದ್ದ ಪ್ರಕಾರ ಅದರ ಬಿಲ್ಲನ್ನು ನಾವು ಕೊಟ್ಟೇ ಇಲ್ಲ, ಚೆಕ್ನು ಕೊಟ್ಟೇ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು 25-30 ಲಕ್ಷ ರೂಪಾಯಿಗಳ ಚೆಕ್ಗಳನ್ನು ಮೊನ್ನೆ ಕಲೆಕ್ಟ್ ಮಾಡಿಕೊಂಡು ಬಂದಿರುವೆ. ನನ್ನ ಹತ್ತಿರ ಆನರ್ ಆಗದೇ ಇರುವ ಚೆಕ್ಗಳಿವೆ. ಬೇಕಾದರೆ ತಮಗೆ ಒದಗಿಸಿಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನನ್ನ ನೆಪಿನ ಪ್ರಕಾರ ಮೊದಲು 10 ಕೋಟಿ ರೂಪಾಯಿ, ಮತ್ತೊಂದು 40 ಲಕ್ಷ ರೂಪಾಯಿಯ ಚೆಕ್ನ್ನು ಕೊಟ್ಟದ್ದು ಅದು ಖಾಲಿ ಇತ್ತು ಎಂದು ಕಾಣುತ್ತದೆ. ಏನೇ ಆಗಲಿ, ಅದರ ಬಗ್ಗೆ ವಿವರವಾದ ಮಾಹಿತಿಯನ್ನು ಕೊಡುತ್ತೇನೆ.

ಇನ್ನು ಎಠಡು ಕೋಟಿ ರೂಪಾಯಿ ಬಾಕಿ ಕೊಡಬೇಕಿತ್ತು. ನಾವು ಕ್ರಮೇಣ ಕೊಡುತ್ತೇವೆಂದು ಕೂಡ ಹೇಳಿದ್ದೇವೆ. ಆದ್ದರಿಂದ ವರದಿ ತರಿಸಿ ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆಯೆಂದು ವಿಚಾರ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮ್ಮಿಂದ ಒಂದೇ ಒಂದು ಆಶ್ವಾಸನೆ ನಾನು ಕೇಳುವುದು ಅಂದರೆ, ಜೇವರಗಿ ತಾಲ್ಲೂಕಿನಲ್ಲಿ ಯಾರು ನೊಂದಿದ್ದಾರೆ, ಯಾರ ಬೆಳೆ ನಾಶವಾಗಿದೆ ಎಂದು ನಿಮ್ಮ ರೆಕಾರ್ಡ್ನಲ್ಲಿದೆ ಅವರಿಗೆ ತಕ್ಷಣ ಪರಿಹಾರ ಒದಗಿಸಿಕೊಡುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟರೆ ಯಾರು ಒಂದು ವಾರದಿಂದ ಅಮರಣಾಂತ ಉಪವಾಸ ಮಾಡುತ್ತಿದ್ದಾರೆ, ಅವರು ವಾಪಸ್ ಬರುತ್ತಾರೆ. ರೈತರ ಪರ ಹೋರಾಟ ಮಾಡಿದವರು ಉಳಿದುಕೊಳ್ಳುತ್ತಾರೆ. ಆದ್ದರಿಂದ ಆ ಒಂದು ಆಶ್ವಾಸನೆಯನ್ನು ನಾನು ತಮ್ಮಿಂದ ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ತಮಗೆ ಗೊತ್ತಿರಬಹುದು; ಕರ್ನಾಟಕದ ಇತಿಹಾಸದಲ್ಲಿ ಇಂತಹ ಪರಿಹಾರಗಳನ್ನು ಕೊಡುವಂತಹದು ಇದೆ ಪ್ರಥಮ. ಯಾವಾಗಲೂ ಕೊಟ್ಟಿರಲಿಲ್ಲ ಅದೂ ಕೂಡ ನನ್ನ ತಲೆಯಲ್ಲಿ ಏನು ಇತ್ತು ಎಂದರೆ, ಆಗ ಐದು ಕೋಟಿ ರೂಪಾಯಿಯಲ್ಲಿ ಎಲ್ಲ ಸುಧಾರಿಸುತ್ತದೆ ಎಂದು ನೋಡಲಿಕ್ಕೆ ಹೋದರೆ ಹತ್ತು ಕೋಟಿ ರೂಪಾಯಿಗೆ ಬಂದು ಈಗ 12 ಕೋಟಿ ರೂಪಾಯಿಗೆ ಹೋಗಿದೆ. ನಮಗೆ ಗಾಬರಿ ಆಗಿದೆ. ಏಕೆಂದರೆ ತಮಗೆ ಗೊತ್ತಿದೆ. ಅನೇಕ ಆದ್ಯತೆ ಕಾರ್ಯಕ್ರಮಗಳು, ನೀರಾವರಿ ವಿದ್ಯುತ್ ಇವೆಲ್ಲ ಬಿಟ್ಟು ಈ ತರಹ ಎಕಸ್ಟ್ರಾ ಪೇಮೆಂಟ್ 135-140 ಕೋಟಿ ರೂಪಾಯಿಗಳನ್ನು ನಾವು ಅತಿವೃಷ್ಟಿಗೆ ಕೊಡಬೇಕಾಯ್ತಿತು, ಭೂಕಂಪದಿಂದ ನೊಂದವರಿಗೆ ನಾವು ಕೊಡಬೇಕಾಯಿತು. ಇದೆಲ್ಲಾ ತಮಗೆ ಗೊತ್ತಿದೆ. 3025 ಕೋಟಿ ರೂಪಾಯಿಗಳಲ್ಲಿ ಇದು ಬರುವುದಿಲ್ಲ. ಇದು ಅಡಿಷನಾಲಿಟಿ ಬರುತ್ತದೆ. ಇದೆಲ್ಲಾ ಒಂದು ವರ್ಷದಲ್ಲಿ ನಮ್ಮ ಸಂಪನ್ಮೂಲ ಇಂತಿಷ್ಟೇ ಆಗುತ್ತದೆ ಎಂದು ಲೆಕ್ಕಾಚಾರ ಹಾಕುತ್ತೇವೆ. ಅದರ ಮೇಲೆ ಇಂತ ಪೇಮೆಂಟ್ಗಳು ಕೂಡ ಬಂದರೆ ಆಯವ್ಯಯಕ್ಕೆ ಮತ್ತು ನಾವು ಕೊಟ್ಟಂತಹ ಪ್ಲಾನಿಗೆ ಕೂಡ ಒಂದು ಆಘಾತ ಬರುತ್ತದೆ. ಅದನ್ನೂ ತಾವು ಅಪ್ರಿಷಿಯೇಟ್ ಮಾಡಬೇಕು. ತಾವು ಹೇಳಿದ್ದೀರಿ. ನಾನು ಆದಷ್ಟು ಬೇಗ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಅವರು ಅಮರಣಾಂತ ಉಪವಾಸ ಕೈಬಿಡಲಿ. ಜೇವರಗಿಯವರಿಗೆ ಪೇಮೆಂಟ್ ಬಾಕಿ ಇದೆ, ಅವರಿಗೆ ಪೇಮೆಂಟ್ ಮಾಡಲಿ ಆದಷ್ಟು ಜಾಗ್ರತೆ. ನಾನು ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.